ಸಂರಕ್ಷಕ'ರ ಸೋಗು ಹಾಕಿದ ವ್ಯಕ್ತಿಗಳು ಮಕ್ಕಳ ಸಾಗಣೆಕೆಯಂತಹ ಅಪಾಯಕಾರಿ ದಂಧೆ, ಅಪರಾಧದಲ್ಲಿ ತೊಡಗಿದವರಾಗಿರುತ್ತಾರೆ. ಹಾಗಾಗಿ ಇಂತಹ ವಿಷಯಗಳಲ್ಲಿ ಜವಾಬ್ದಾರಿಯಿಂದ, ಸಂವೇದನೆಯಿಂದ ಮುಂದುವರಿಯುವುದು ಬಹಳ ಮುಖ್ಯ.

◆ ಅನಾಥ ಮಕ್ಕಳು ಅಂದರೆ ಯಾರು?

ಮಗುವಿನ ಇಬ್ಬರೂ ಪೋಷಕರು ತೀರಿಹೋಗಿದ್ದರೆ, ಪೋಷಕರು ಆ ಮಗುವನ್ನು ತ್ಯಜಿಸಿದ್ದರೆ, ಅಥವಾ ಪೋಷಕರು ಮಗುವನ್ನು ಸರ್ಕಾರ, ಸಂಸ್ಥೆಗಳ ವಶಕ್ಕೆ ಬಿಟ್ಟುಕೊಟ್ಟಿದ್ದರೆ, ಕಾನೂನು ಅಂತಹ ಮಗುವನ್ನು ಅನಾಥ ಮಗು ಎಂದು ಗುರುತಿಸುತ್ತದೆ. ಎಷ್ಟೋ ಬಾರಿ ಹತ್ತಿರದ ಸಂಬಂಧಿಗಳು ಆ ಮಗುವನ್ನು ನೋಡಿಕೊಳ್ಳುತ್ತಾರೆ. ಆದರೆ ಅದೂ ಸಹ ದತ್ತು ಎನಿಸಿಕೊಳ್ಳುವುದಿಲ್ಲ.

◆ ದತ್ತು ತೆಗೆದುಕೊಳ್ಳುವುದು ಹೇಗೆ?

ಭಾರತದಲ್ಲಿ ಅನಾಥ ಮಕ್ಕಳ ದತ್ತಕಕ್ಕೆ ಸಂಬಂಧಿಸಿದ ವಿಷಯಗಳನ್ನು, ಬಾಲ ನ್ಯಾಯಿಕ ಕಾಯ್ದೆ 2015 ಹಾಗೂ ದತ್ತಕ ಅಧಿನಿಯಮಗಳು 2017 – ಇವು ನಿರ್ಣಯಿಸುತ್ತವೆ. ಈ ಕಾಯ್ದೆ, ಅಧಿನಿಯಮಗಳು ಹೇಳುವಂತೆ, ಅನಾಥ ಮಗುವನ್ನು ದತ್ತು ತೆಗೆದುಕೊಳ್ಳುವ ಹಂಬಲ ಇರುವ ಗಂಡ ಹೆಂಡತಿಯರು, ಸರ್ಕಾರ ನಿಯೋಜಿಸಿರುವ ಕೇಂದ್ರ ದತ್ತಕ ಸಂಪನ್ಮೂಲ ಪ್ರಾಧಿಕಾರಕ್ಕೆ (Central Adoption Resource Authority – CARA) ಅರ್ಜಿ ಸಲ್ಲಿಸಿ ನೋಂದಾಯಿಸಿಕೊಳ್ಳಬೇಕು.

ಹಾಗೆಯೇ, ಅನಾಥ ಮಕ್ಕಳ ನೋಂದಣಿಯನ್ನೂ ಈ ಪ್ರಾಧಿಕಾರದ ರಿಜಿಸ್ಟ್ರಿಯಲ್ಲಿ ಮಾಡಲಾಗುತ್ತದೆ. ಪ್ರತೀ ಮಗುವಿಗೆ ಎಂತಹ ಪೋಷಕರು, ತಂದೆ–ತಾಯಿ, ಮನೆ ಹೊಂದುತ್ತದೆ ಎಂದು ವಿಶ್ಲೇಷಿಸಿ, ಈ ಪ್ರಾಧಿಕಾರ ಅಂತಹ ಭಾವೀ ಪೋಷಕರಿಗೆ ಕರೆ ಕಳಿಸುತ್ತದೆ. ಆ ಪೋಷಕರು, ಮಗು ಒಬ್ಬರನ್ನೊಬ್ಬರು ಒಪ್ಪಿದ ನಂತರ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ನ್ಯಾಯಾಧೀಶರ ಸಮ್ಮತಿಯೊಂದಿಗೆ ದತ್ತಕದ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. ಈ ಪ್ರಾಧಿಕಾರದ ಮೂಲಕ ಹೋಗದೇ ಇನ್ಯಾವುದೇ ರೀತಿಯಲ್ಲಿ, ಯಾವುದೇ ಅನಾಥ ಮಗುವಿನ ದತ್ತು ನೀವು ತೆಗೆದುಕೊಂಡಿದ್ದೀರಿ ಎಂದು ನೀವು ಅಂದುಕೊಂಡರೂ, ಅದು ಕಾನೂನಾತ್ಮಕ ದತ್ತು ಎನಿಸಿಕೊಳ್ಳುವುದಿಲ್ಲ.

ನಿಜ ಸ್ಥಿತಿ ಹೀಗಿದೆ

UNICEFನ 2016ರ ಒಂದು ವರದಿಯ ಪ್ರಕಾರ ಭಾರತದಲ್ಲಿ ಒಟ್ಟು 3 ಕೋಟಿ ಅನಾಥ ಮಕ್ಕಳಿದ್ದಾರೆ. ಕೋವಿಡ್‌ನಿಂದಾಗಿ ಈಗ ಆ ಸಂಖ್ಯೆ ಇನ್ನೂ ಹೆಚ್ಚಾಗಿರುತ್ತದೆ. ಆದರೆ, ಈ ಮಕ್ಕಳನ್ನು ಹೇಗೆ ನೋಡಿಕೊಳ್ಳಬೇಕು ಎನ್ನುವುದರ ಬಗ್ಗೆ ನಮ್ಮ ಸಮಾಜ, ಸಂಸ್ಥೆಗಳು, ಸರ್ಕಾರಗಳು ಎಷ್ಟರಮಟ್ಟಿಗೆ ಜವಾಬ್ದಾರಿಯಿಂದ ಕೆಲಸ ಮಾಡಿವೆ ಎಂಬುದರ ಬಗ್ಗೆ ನಿಗಾ ಹರಿಸಿದರೆ, ಹಲವು ಕಟು ಸತ್ಯಗಳು ಮುಂದೆ ಬರುತ್ತವೆ. ಮಕ್ಕಳ ಆಶ್ರಯಗೃಹಗಳಲ್ಲಿ ಹೆಚ್ಚೆಂದರೆ 5 ಲಕ್ಷ ಮಕ್ಕಳಿದ್ದಾರೆ. ಇವರಲ್ಲಿ, CARA – ಪ್ರಾಧಿಕಾರದ ರಿಜಿಸ್ಟ್ರಿಯ ಪ್ರಕಾರ ಕಾನೂನಾತ್ಮಕವಾಗಿ ದತ್ತು ತೆಗೆದುಕೊಳ್ಳಬಹುದಾದ ಪಟ್ಟಿಯಲ್ಲಿ ಇರುವ ಮಕ್ಕಳು, 2000 (ಎರಡು ಸಾವಿರ), ಅಷ್ಟೇ.

ಹಾಗೆಯೇ, ಪ್ರಸ್ತುತ ಈ CARA ಪ್ರಾಧಿಕಾರದ ರಿಜಿಸ್ಟ್ರಿಯ ಪ್ರಕಾರ 30,000 ಭಾವೀ ಪೋಷಕರು ಇದ್ದಾರೆ. ಅಂದರೆ, 30,000 ಗಂಡ – ಹೆಂಡಿರು, ತಮಗೆ ದತ್ತು ತೆಗೆದುಕೊಳ್ಳುವ ಆಸಕ್ತಿ ಇದೆ ಎಂದು ತಮ್ಮ ಹೆಸರನ್ನು ನೋಂದಾಯಿಸಿದ್ದಾರೆ. ಆದರೆ, ಈ ಆಸಕ್ತ ಪೋಷಕರಿಗೆ ಮಗು ಸಿಕ್ಕು, ಆ ಮಕ್ಕಳಿಗೆ ಪೋಷಕರು, ಅವರದ್ದೇ ಅನ್ನುವ ಕುಟುಂಬ ಸಿಗಲು ಬಹಳ ಕಾಲ ತೆಗೆದುಕೊಳ್ಳುತ್ತದೆ. ಇದು ನಮ್ಮ ಸಮಾಜದ ಮನಸ್ಥಿತಿಯನ್ನು, ಸಂಸ್ಥೆಗಳ ಹಾಗೂ ಸರ್ಕಾರಗಳ ಉದಾಸೀನತೆ, ಬೇಜವಾಬ್ದಾರಿ ಹಾಗೂ ಅಸಾಮರ್ಥ್ಯವನ್ನು ತೋರಿಸುತ್ತದೆ.

◆ ನಾವು ಮಾಡಬಹುದಾದ್ದೇನು?

ಅನಾಥ ಮಗುವನ್ನು ನೀವು ಕಂಡಲ್ಲಿ ಅಥವಾ ನೀವು ಆ ಅನಾಥ ಮಗುವಿನ ಸಂಬಂಧಿಯಾಗಿದ್ದು, ನಿಮಗೆ ನೋಡಿಕೊಳ್ಳಲು ಆಗದಿದ್ದಲ್ಲಿ, ಮಕ್ಕಳ



ಸಹಾಯವಾಣಿ 1098ಕ್ಕೆ ಕರೆ ಮಾಡಬಹುದು, ಹತ್ತಿರದ ವಿಶೇಷ ಮಕ್ಕಳ ದತ್ತಕ ಸಂಸ್ಥೆಗಳಿಗೆ (Specialised Adoption Agency) ಕರೆ ಮಾಡಿ ಅವರ ಸಲಹೆ ಪಡೆಯಬಹುದು, ಅಥವಾ ಮಗುವನ್ನು ಸರ್ಕಾರ ನಿಯೋಜಿಸಿರುವ ಮಕ್ಕಳ ಕಲ್ಯಾಣ ಸಮಿತಿ (Child Welfare Committee – CWC)ಗೆ ಒಪ್ಪಿಸಬಹುದು.

ನೀವು ಆ ಮಗುವಿನ ಸಂಬಂಧಿಯಾಗಿದ್ದರೂ, ಅನಾಥ ಮಗುವನ್ನು ದತ್ತು ತೆಗೆದುಕೊಳ್ಳಬೇಕಾದರೆ, ನೀವೂ CARA – ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಂಡು, ಇವೇ ಪ್ರಕ್ರಿಯೆಯನ್ನು ಪಾಲಿಸಬೇಕು.

◆ ಸರ್ಕಾರ ಕೆಲಸ ಮಾಡುತ್ತಿದೆಯೇ?

ಮೊದಲನೆಯದಾಗಿ, 3 ಕೋಟಿ ಅನಾಥ ಮಕ್ಕಳ ಪರಿಸ್ಥಿತಿ, ಪೋಷಣೆಯ ಬಗ್ಗೆ ಯಾವ ಕೆಲಸ, ಕಾರ್ಯನೀತಿಯೂ ಸರ್ಕಾರ ಮಾಡಿದಂತಿಲ್ಲ. ಈ ಮಕ್ಕಳಲ್ಲಿ ಕೆಲವರನ್ನು ಅವರ ಸಂಬಂಧಿಕರೇ ಚೆನ್ನಾಗಿ ನೋಡಿಕೊಳ್ಳುತ್ತಿರಬಹುದು. ಆದರೆ ಹೆಚ್ಚಿನ ಮಕ್ಕಳು ಬಾಲ ಕಾರ್ಮಿಕರಾಗಿಯೋ, ಸಂಬಂಧಿಕರ ಮನೆಯಲ್ಲಿ ಕೆಲಸದ ಆಳಾಗಿಯೋ, ಲೈಂಗಿಕ ವೃತ್ತಿಗೆ ದೂಡಲ್ಪಟ್ಟೋ... ಹೀಗೆ, ತೀರಾ ಸಂಕಷ್ಟದ ಪರಿಸ್ಥಿತಿಗಳಲ್ಲಿ ಇರುತ್ತಾರೆ.

ಈ 3 ಕೋಟಿ ಅನಾಥ ಮಕ್ಕಳಲ್ಲಿ, ಅನಾಥಾಶ್ರಮಗಳಲ್ಲಿ ಇರುವ 5 ಲಕ್ಷ ಮಕ್ಕಳ ಪೋಷಣೆ ಯಾವ ರೀತಿ ನಡೆಯುತ್ತಿದೆ, ಆ ಅನಾಥಾಶ್ರಮದಲ್ಲಿನ ಪರಿಸ್ಥಿತಿ, ಸೌಲಭ್ಯಗಳು ಹೇಗಿವೆ, ಆ ಮಕ್ಕಳ ಶಿಕ್ಷಣ ನಡೆಯುತ್ತಿದೆಯೇ ಎನ್ನುವುದರ ಪರಿಶೀಲನೆ ಕಾಲಕಾಲಕ್ಕೆ ನಡೆಯುತ್ತಿಲ್ಲ.

ದತ್ತು ತೆಗೆದುಕೊಳ್ಳಬಹುದಾದ ಅನಾಥ ಮಗು – ಎಂದು ಸರ್ಕಾರ ಗುರುತಿಸಿದ ಮಕ್ಕಳೂ ಸರಿಯಾದ ಸಮಯಕ್ಕೆ, ಶೀಘ್ರವಾಗಿ ಒಳ್ಳೆಯ ದತ್ತು ಪೋಷಕರ ಬಳಿ ಹೋಗುವಂತಹ ಸರಳ ಪ್ರಕ್ರಿಯೆಯನ್ನು ರೂಪಿಸಿಲ್ಲ. ಈಗಿರುವ ಮಾರ್ಗಗಳು ಹಲವಾರು ಸರ್ಕಾರಿ ಪ್ರಕ್ರಿಯೆಗಳನ್ನು ಹಾದು, ಸಮಯ ತೆಗೆದುಕೊಳ್ಳುವುದರಿಂದ ಹಲವಾರು ಆಸಕ್ತ ಪೋಷಕರು ದತ್ತು ತೆಗೆದುಕೊಳ್ಳುವ ಬಗ್ಗೆ ಹಿಂದೇಟು ಹಾಕುವಂತಾಗಿದೆ. ಇತ್ತೀಚೆಗೆ, ಮಸ್ಕತ್‌ನಲ್ಲಿ ನೆಲೆಸಿರುವ ಭಾರತೀಯ ಮೂಲದ ಗಂಡ – ಹೆಂಡತಿ, ಬೀದರ್‌ನಲ್ಲಿದ್ದ ಒಬ್ಬ ಅನಾಥ ಮಗುವನ್ನು ದತ್ತು ತೆಗೆದುಕೊಂಡರೂ, ದತ್ತಕದ ಕಾನೂನಾತ್ಮಕ ಪ್ರಕ್ರಿಯೆ ಪೂರ್ಣಗೊಳ್ಳದೇ ಕೆಲವು ತಿಂಗಳುಗಳ ಕಾಲ ಚೆನ್ನೈಯ ಹೋಟೆಲ್ ರೂಮಿನಲ್ಲೇ ಕಳೆಯಬೇಕಾದ ಪರಿಸ್ಥಿತಿ ಬಂದೊದಗಿತ್ತು.

ಜನವರಿ 2000ದಲ್ಲಿ, 'ವೇರ್ ಆರ್ ಇಂಡಿಯಾಸ್ ಚಿಲ್ಡ್ರನ್' (WAIC), ಎಂಬ ಸಂಸ್ಥೆ ಮಾಡಿದ ಸಮೀಕ್ಷೆಯ ಪ್ರಕಾರ, ಭಾರತದ ಜನರಲ್ಲಿ ಹಾಗೂ ಸರ್ಕಾರಕ್ಕೆ, ಮಕ್ಕಳ ದತ್ತಕದ ಬಗ್ಗೆ ಸರಿಯಾದ ಅರಿವು, ಸೂಕ್ಷ್ಮ ಸಂವೇದನೆ ಇಲ್ಲ. ಅಷ್ಟೇ ಅಲ್ಲದೇ, ಅನಾಥ ಮಕ್ಕಳು ಹಾಗೂ ದತ್ತಕಕ್ಕೆ ಸಂಬಂಧಿಸಿದ ಕಾನೂನು, ನಿಯಮಗಳು, ಮನಸ್ಥಿತಿಯಲ್ಲಿ ಬಹಳಷ್ಟು ಬದಲಾವಣೆಯ ಅಗತ್ಯ ಇದೆ.

(ಓದುಗರ ಗಮನಕ್ಕೆ: ಇದು ಅನಾಥ ಮಕ್ಕಳ ದತ್ತಕಕ್ಕೆ ಸಂಬಂಧಿಸಿ ಮಾತ್ರ ಬರೆದ ಲೇಖನ. ದತ್ತಕ ಕಾನೂನು ಇನ್ನೂ ವ್ಯಾಪಕವಾಗಿದೆ.)

ಪ್ರತಿಕ್ರಿಯಿಸಿ: feedback@sudha.co.in